C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ- 9 ಪಿ. ಡಬ್ಲ್ಯೂ -8

ದಿನಾಂಕ ಃ 22.01.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಆನಂದ್ |
| ತಂದೆಯ ಹೆಸರು | ಮರೀಗೌಡ |
| ವಯಸ್ಸು | 37 ವರ್ಷ |
| ಉದ್ಯೋಗ | ವಾಹನ ಚಾಲಕ |
| ವಾಸ | ಗೆಜ್ಜಲಗರೆ ಗ್ರಾಮ |

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ

1. ಮೊದಲು ನಾನು ತರಕಾರಿ ವ್ಯಾಪಾರ ಮಾಡುತ್ತಿದ್ದೆ. ನಾನು ಮಾರುತಿ ಓಮಿನಿ ವಾಹನದಲ್ಲಿ ತರಕಾರಿಗಳನ್ನು ತೆಗೆದುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದೆ. ನನಗೆ ನಮ್ಮ ಊರಿನವರಾದ ಚಾಸಾ-1 ರಿಂದ 8 ಗೊತ್ತು. ನನಗೆ ನಮ್ಮ ಊರಿನವರಾದ ಪುಟ್ಟ ಅಲಿಯಾಸ್ ಪ್ರಸಾದ್, ಇಂದು ಕುಮಾರ್ ಹಾಗೂ ಸ್ವರೂಪ್ ಗೊತ್ತು. ನಮ್ಮ ಗ್ರಾಮದವನಾದ ಮೃತ ಹೇಮಂತ್ ಕುಮಾರ ನನಗೆ ಗೊತ್ತಿತ್ತು.

2. ದಿಃ09.05.2021 ರಂದು ಎಂದಿನಂತೆ ಸಂಜೆ 7.50 ರಿಂದ 8.15 ರ ಸಮಯದಲ್ಲಿ ನಾನು ತರಕಾರಿ ವ್ಯಾಪಾರ ಮುಗಿಸಿಕೊಂಡು ನನ್ನ ಮಾರುತಿ ಓಮಿನಿ ಕಾರಿನಲ್ಲಿ ವಾಪಸ್ಸು ನಮ್ಮ ಗ್ರಾಮಕ್ಕೆ ಬರುತ್ತಿದ್ದೆ. ಗೆಜ್ಜಲಗೆರೆಯ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ನಾನು ಬಂದಾಗ ಅಲ್ಲಿ ಗಲಾಟೆ ನಡೆಯುತ್ತಿತ್ತು. ಸದರಿ ಸ್ಥಳದಲ್ಲಿ ಆರೋಪಿಗಳಾದ ಪುಟ್ಟ, ಇಂದು ಕುಮಾರ್ ಹಾಗೂ ಸಂತೋಷ್ ನಡುವೆ ಗಲಾಟೆ ನಡೆಯುತ್ತಿತ್ತು ಅಲ್ಲಿ ಪವನ್ ಮತ್ತು ತಮ್ಮೇಗೌಡ ಇದ್ದರು. ಅಲ್ಲಿ ಕ್ರಿಕೆಟ್ ಟೂರ್ನಮೆಂಟ್ ಬಗ್ಗೆ ಸದರಿ ಗಲಾಟೆ ನಡೆಯುತ್ತಿತ್ತು. ನಾನು ಮತ್ತು ಅಲ್ಲಿದ್ದ ಇತರರು ಸಂತೋಷ್ ನನ್ನು ಸಮಾಧಾನ ಮಾಡಿ ಗಲಾಟೆಯನ್ನು ಬಿಡಿಸಿದೆವು. ನಂತರ ಅಲ್ಲಿಗೆ ಹೇಮಂತ್ ಕುಮಾರ್ ಬಂದು ಪುಟ್ಟ ಮತ್ತು ಇಂದು ಕುಮಾರನನ್ನು ಏಕೆ ಗಲಾಟೆ ಮಾಡುತ್ತಿದ್ದೀರಾ ಎಂದು ಕೇಳಿದನು. ಆಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು.

3. ಇಂದುಕುಮಾರ್ ಮೊದಲು ಹಾಲಿನ ಟೆಂಡರು ತೆಗೆದುಕೊಂಡಿದ್ದರು. ನಂತರ ಪವನ್ ಹೆಸರಿನಲ್ಲಿ ಹೇಮಂತ್ ಕುಮಾರ ಸದರಿ ಹಾಲಿನ ಟೆಂಡರನ್ನು ತೆಗೆದುಕೊಂಡಿದ್ದನು. ಸ್ಥಳದಲ್ಲಿ

ನಡೆಯುತ್ತಿದ್ದ ವಾದವನ್ನು ಬಿಡಿಸಿ ನಾವು ಕಳುಹಿಸಿದೆ. ಹೋಗುವ ಸಮಯದಲ್ಲಿ ಇಂದು ಕುಮಾರನು ಪವನ್ ಗೆ ನೀನು ಇವತ್ತು ಗೆದ್ದಿದ್ದೀಯಾ, ಇನ್ನು 2-3 ದಿನಗಳಲ್ಲಿ ಹೇಮಂತನನ್ನು ಏನಾದರೂ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. ಪವನ್ ಕುಮಾರ್ ಡೈರಿಯ ಕಡೆಗೆ ಹೋದರು ನಾನು ಸಹ ಡೈರಿಯ ಕಡೆಗೆ ಹೋದೆನು.

4. ಮರುದಿನ ನಾನು ರಾತ್ರಿ 8.00 ರಿಂದ 8.15 ರ ಸಮಯದಲ್ಲಿ ನಾನು ಡೈರಿಯ ಬಳಿ ವಾಹನವೊಂದರ ಒಂದು ಬದಿ ಇದ್ದೆನು. ಸದರಿ ವಾಹನದ ಇನ್ನೊಂದು ಬದಿ ಇದ್ದ ಪುಟ್ಟ ಪೋನಿನಲ್ಲಿ ಯಾರಿಗೋ ಹೇಮಂತ ಬೈಕಿನಲ್ಲಿ ಬರುತ್ತಿದ್ದಾರೆ ಅವರನ್ನು ಮುಗಿಸಿಬಿಡಿ ಎಂದು ಮಾಹಿತಿ ಕೊಡುತ್ತಿದ್ದರು. ಆ ದಿನ ಹೇಮಂತ ಕುಮಾರ ಜೊತೆ ಸುನಿಲ್ ಕುಮಾರ ಸಹ ಇದ್ದರು. ನಂತರ ಅದೇ ರಾತ್ರಿ 8.00 ರಿಂದ 8.30 ಗಂಟೆ ಸಮಯದಲ್ಲಿ ನಮ್ಮ ಗ್ರಾಮಕ್ಕೆ ಬರುತ್ತಿದ್ದಾಗ ಹೇಮಂತ ಕುಮಾರನ ಕೊಲೆಯಾಗಿದೆ ಎಂದು ನನ್ನ ಸ್ನೇಹಿತರು ನನಗೆ ಪೋನ್ ಮಾಡಿ ಹೇಳಿದ್ದರಿಂದ ನನಗೆ ಗೊತ್ತಾಯಿತು.

5. ಘಟನೆಯ ದಿನ ಪುಟ್ಟ ಯಾರಿಗೋ ಪೋನ್ ಮಾಡಿ ಹೇಮಂತ ಬೈಕಿನಲ್ಲಿ ಬರುತ್ತಿದ್ದಾರೆ ಅವರನ್ನು ಮುಗಿಸಿಬಿಡಿ ಎಂದು ಮಾಹಿತಿ ಕೊಡುತ್ತಿದ್ದರು ಎನ್ನುವ ವಿಚಾರವನ್ನು ನಾನು ಹೇಮಂತ ಕುಮಾರನ ಶವವು ಶವಾಗಾರದ ಬಳಿ ಇದ್ದಾಗ ಅಲ್ಲಿದ್ದ ಪವನ್ ಕುಮಾರ ಹಾಗೂ ಅಭಿನಯ್ ಜಿ. ಎನ್. ಅವರಿಗೆ ಹೇಳಿದೆನು. ಆಗ ಅಭಿನಯ್ ಈಗ ಮಾತನಾಡುವುದು ಬೇಡ ಆಮೇಲೆ ಮಾತನಾಡೋಣ ಬಿಡು ಎಂದು ಹೇಳಿದರು. ಸದರಿ ವಿಚಾರವನ್ನು ಹೇಮಂತ ಕುಮಾರನ ಅಂತ್ಯ ಸಂಸ್ಕಾರವಾದ ಮರುದಿನ ನಾವು ಪುನಃ ಮಾತನಾಡಿದೆವು. ಆಗ ಅಭಿನಯ್ ನೀನು ಈ ವಿಚಾರವನ್ನು ಮೊದಲೇ ಹೇಳಬೇಕಾಗಿತ್ತು ಎಂದು ನನಗೆ ಹೇಳಿದರು. ಆಗ ನಾನು ನನಗೆ ಹೀಗಾಗುತ್ತದೆ ಎಂದು ಗೊತ್ತಾಗಲಿಲ್ಲ ಎಂದು ಹೇಳಿದೆನು.

6. ಹೇಮಂತ ಕುಮಾರನ ಕೊಲೆಯಾದ 3-4 ದಿನಗಳ ನಂತರ ಪೊಲೀಸರು ನನ್ನನ್ನು ಕರೆದಿದ್ದರು. ಆಗ ನಾನು ಈ ದಿನ ಹೇಳಿದ ಎಲ್ಲಾ ವಿಚಾರಗಳನ್ನು ಪೋಲಿಸರಿಗ ಹೇಳಿದೆನು. ಹೇಮಂತ ಕುಮಾರ ಹಾಗೂ ಸುನಿಲ್ ಕುಮಾರ ಘಟನೆಯಾದ ದಿನ ಪ್ರಯಾಣ ಮಾಡಿದ ವಾಹನದ ಸಂಖ್ಯೆಯನ್ನು ನಾನು ಹೇಳಲಾರೆ. ಹೇಮಂತ ಕುಮಾರ ಕೊಲೆಯನ್ನು ಇಂದು ಕುಮಾರ್, ಪುಟ್ಟ, ಸ್ವರೂಪ್ ಹಾಗೂ ಮುಂತಾದವರು ಮಾಡಿದ್ದಾರೆ ಎಂದು ನಮ್ಮ ಗ್ರಾಮಸ್ತರು ಮಾತನಾಡಿಕೊಳುತ್ತಿದ್ದುದರಿಂದ ನನಗೆ ಗೊತ್ತಾಯಿತು.

<u>ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ಸಿ. ಪಿ. ವಕೀಲರಿಂದ :</u>

7. ನಾನು ವ್ಯಾಪಾರ ಮಾಡಲು ಉಪಯೋಗಿಸುತ್ತಿದ್ದ ಮಾರುತಿ ಓಮಿನಿ ವಾಹನದ ನೊಂದಾವಣಿ ಸಂಖ್ಯೆ ನನಗೆ ನೆನಪಿಲ್ಲ. ಅದು ನನ್ನ ಸ್ನೇಹಿತರದ್ದಾಗಿದ್ದು, ನಾನು ಅತನಿಗೆ ವಾಪಸ್ಸು ಕೊಟ್ಟಿರುತ್ತೇನೆ. ಸದರಿ ವಾಹನವನ್ನು ಸುಮಾರು 15-20 ದಿದಿನಗಳ ಕಾಲ ಮಾತ್ರ ಉಪಯೋಗಿಸಿರುತ್ತೇನೆ. ಸದರಿ ವಾಹನದ ಮಾಲೀಕ ಮಂಡ್ಯದವರಾದ ಗುರು ಎನ್ನುವವರು. ನನ್ನ ಬಳಿ ಇರುವ ಮಾರುತಿ ಡಿಸೈರ್ ವಾಹನದ ನೊಂದಾವಣಿ ಸಂಖ್ಯೆ ಕೆಎ.11.ಬಿ.4185 ಆಗಿರುತ್ತದೆ. ಅದು ಹಳದಿ ಬೋರ್ಡು ವಾಹನ ಎಂದರೆ ಸರಿ. ಕಳೆದ 6-7 ವರುಷಗಳಿಂದ ಸದರಿ ವಾಹನವನ್ನು ನಾನು ಬಾಡಿಗೆಗಾಗಿ ಓಡಿಸುತ್ತಿದ್ದೇನೆ. ನಾನು ಓಮಿನಿ ಕಾರಿನಲ್ಲಿ ತರಕಾರಿ ವ್ಯಾಪಾರವನ್ನು ಎಂದೂ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಕಾರನ್ನು ಬಾಡಿಗೆಗೆ ಓಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

8. ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ಕ್ರಿಕೆಟ್ ಟೂರ್ನಮೆಂಟ್ ವಿಚಾರದಲ್ಲಿ ಗಲಾಟೆ ನಡೆದ ಸ್ಥಳದಲ್ಲಿ 10-12 ಜನ ಇದ್ದರು. ಕ್ರಿಕೆಟ್ ಟೂರ್ನಮೆಂಟ್ ನಡೆಸಬೇಕು ಆ ಸಮಯದಲ್ಲಿ ನಮ್ಮ ಊರಿನಲ್ಲಿ ಯಾವುದೇ ಬೋರ್ಡು ಹಾಕಿರಲಿಲ್ಲ. ಪ್ರತಿ ವರುಷ ನಮ್ಮ ಊರಿನಲ್ಲಿ ಕ್ರಿಕೆಟ್ ಟೂರ್ನಮೆಂಟ್ ಅನ್ನು ಮದ್ದೂರಿನವರು ಹಾಗೂ ನಮ್ಮ ಊರಿನ ಗ್ರಾಮಸ್ಥರಾದ ಹರೀಶ, ಸಂತೋಷ್ ಮುಂತಾದವರು ಸೇರಿ ನಡೆಸುತ್ತಿದ್ದರು. ಇಂದು ಕುಮಾರ್ ಕ್ರಿಕೆಟ್ ಟೂರ್ನಮೆಂಟ್ ನಡೆಸಿದ್ದಾರೆ ಹಾಗೂ ಸ್ಪಾನ್ಸರ್ ಮಾಡಿದ್ದಾರೆ. ಘಟನೆಗೂ 6 ತಿಂಗಳಿಂದ 1 ವರುಷದ ಹಿಂದೆ ಆ ರೀತಿ ಇಂದು ಕುಮಾರ್ ಕ್ರಿಕೆಟ್ ಟೂರ್ನಮೆಂಟ್ ನಡೆಸಿದ್ದಾರೆ ಹಾಗೂ ಸ್ಪಾನ್ಸರ್ ಮಾಡಿದ್ದಾರೆ. ನಾನು ಹೇಳಿದಂತೆ ಇಂದು ಕುಮಾರ್ ಎಂದೂ ಯಾವುದೇ ಕ್ರಿಕೆಟ್ ಟೂರ್ನಮೆಂಟ್ ನಡೆಸಿಲ್ಲವಾದರೂ ಸಹ ನಾನು ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಿಕೆಟ್ ಟೂರ್ನಮೆಂಟ್ ಉದ್ಘಾಟನೆ ಮಾಡಲು ನಮ್ಮ ಊರಿಗೆ ರಾಜಕಾರಣಿಗಳು ಅಥವಾ ಪೊಲೀಸ್ ಅಧಿಕಾರಿಗಳು ಬರುತ್ತಿದ್ದರು ಎಂದರೆ ಸರಿಯಲ್ಲ.

9. ನಮ್ಮ ಊರಿನ ಸಂತೋಷ್ ಕುಮಾರನ ಮನೆ ಇರುವ 3 ಬೀದಿಗಳ ಆಚೆಗೆ ಹೇಮಂತ ಕುಮಾರನ ಮನೆ ಇದೆ. ಸಂತೋಷ್ ನನ್ನು ಗಲಾಟೆ ಬಿಡಿಸಿ ಮನೆಗೆ ಕಳುಹಿಸಿದ ನಂತರ ಸ್ಥಳಕ್ಕೆ ಹೇಮಂತ ಕುಮಾರ ಬರುವಾಗ ಆತನೊಂದಿಗೆ ಸಂತೋಷ್ ಸ್ಥಳಕ್ಕೆ ಬಂದಿರಲಿಲ್ಲ.

10. ದಿ:09.05.2021 ರಂದು ನಮ್ಮ ಊರಿನಲ್ಲಿ ಕ್ರಿಕೆಟ್ ಟೂರ್ನಮೆಂಟ್ ವಿಚಾರದಲ್ಲಿ ನನ್ನ ಸಮಕ್ಷಮ ಗಲಾಟೆ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ಕುಮಾರ್ ತಮ್ಮ ಹೆಸರಿನಲ್ಲಿ ಕೆ ಎಂ ಎಫ್ ಟೆಂಡರು ತೆಗೆದುಕೊಂಡಿದ್ದರು. ಕೆ ಎಂ ಎಫ್ ಟೆಂಡರ್ ವಿಚಾರದಲ್ಲಿ ನಮ್ಮ

ಊರಿನಲ್ಲಿ ಗಲಾಟೆಯಾದ ವಿಚಾರ ನನಗ ಗೊತ್ತಿಲ್ಲ ಎಂದು ಸಾಕ್ಷಿ ಒಂದು ಬಾರಿ ನಂತರ ಗೊತ್ತಾಯಿತು ಎಂದು ಇನ್ನೊಂದು ಬಾರಿ ನುಡಿದಿದ್ದಾರೆ.

11. ಹೇಮಂತ ಕುಮಾರನು ಪವನ್ ಕುಮಾರನ ಹಸರಿನಲ್ಲಿ ಯಾವ ವರುಷ ಟೆಂಡರ್ ತೆಗೆದುಕೊಂಡಿದ್ದನು ಎಂದು ನನಗೆ ಗೊತ್ತಿಲ್ಲ. ಇಂದುಕುಮಾರ ತನ್ನ ಹೆಸರಿನಲ್ಲಿಯಾಗಲೀ ಅಥವಾ ಬೇರೆಯವರ ಹೆಸರಿನಲ್ಲಾಗಲೀ ಎಂದೂ ಕೆ ಎಂ ಎಫ್ ಟೆಂಡರ್ ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ.

12. ದಿಃ 10.05.2021 ರಂದು ನಾನು ಕೆ ಎಂ ಎಫ್ ಡೈರಿಯ ಬಳಿ ಮಾರುತಿ ಓಮಿನಿ ಕಾರಿನಲ್ಲಿ ಹೋಗಿದ್ದೆ. ಆ ಸಮಯದಲ್ಲಿ ಅಂದರೆ 8-15 ರಿಂದ 8.20 ರ ಸಮಯದಲ್ಲಿ ಹೇಮಂತ್ ಕುಮಾರ್ ಡೈರಿ ಬಳಿಯಿಂದ ಹೊರಟಿದ್ದನ್ನು ನಾನು ನೋಡಿದ್ದೆ. ಆ ಸಮಯದಲ್ಲಿ ಹಾಲಿನ ಕ್ಯಾಂಟರ್ ವಾಹನದ ಒಂದು ಬದಿಯಲ್ಲಿ ನಾನು ಇದ್ದೆನು ಹಾಗೂ ಸದರಿ ಕ್ಯಾಂಟರಿನ ಇನ್ನೊಂದು ಬದಿಯಲ್ಲಿ ಪುಟ್ಟ ಇದ್ದನು. ನಾನು ಸದರಿ ಸ್ಥಳಕ್ಕೆ ಬಂದು ನನ್ನ ವಾಹನವನ್ನು ತಂದು ನಿಲ್ಲಿಸುವಾಗ ಕ್ಯಾಂಟರಿನ ಇನ್ನೊಂದು ಬದಿ ಪುಟ್ಟ ನಿಂತಿದ್ದನ್ನು ನಾನು ನೋಡಿದ್ದೆ. ಆ ಸಮಯದಲ್ಲಿ ಪುಟ್ಟನ ಜೊತೆಗೆ ಒಬ್ಬ ಹುಡುಗ ಇದ್ದನು. ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಆ ಸಮಯದಲ್ಲಿ ಕ್ಯಾಂಟರ್ ಬಳಿ ನಾನು ಪುಟ್ಟ ಹಾಗೂ ಇನ್ನು ಒಬ್ಬ ಹುಡುಗನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಪುಟ್ಟನ ಬಳಿ ಆ ಸಮಯದಲ್ಲಿ ಇದ್ದ ಹುಡುಗ ನಮ್ಮ ಊರಿನವನಲ್ಲವಾದ್ದರಿಂದ ಆತನು ನನಗೆ ಯಾರೆಂದು ಗೊತ್ತಿಲ್ಲ. ಆ ದಿನ ನಾನು ಡೈರಿಯಿಂದ ನಮ್ಮ ಊರಿಗೆ 8.45 ರಿಂದ 9.00 ಗಂಟೆಗೆ ಹೋದೆನು.

13. ನಮ್ಮ ಊರಿನಿಂದ ಕೆ ಎಂ ಎಫ್ ಡೈರಿ ಅರ್ಧ ಕಿಮಿ ದೂರದಲ್ಲಿದೆ. ನಾನು ಡೈರಿಯಿಂದ ನಮ್ಮ ಊರಿಗೆ ಹೋಗುವಾಗ ಹೇಮಂತ ಕುಮಾರ್ ಡೈರಿಯ ಬಳಿ ಇದ್ದನು.

14. ದಿಃ 10.05.2021 ರಂದು ನಾನು ರಾತ್ರಿ 8.00 ರಿಂದ 8.15 ರ ಸಮಯದಲ್ಲಿ ಡೈರಿಯ ಬಳಿ ವಾಹನವೊಂದರ ಒಂದು ಬದಿ ಇದ್ದಾಗ, ಸದರಿ ವಾಹನದ ಇನ್ನೊಂದು ಬದಿ ಇದ್ದ ಪುಟ್ಟ ಫೋನಿನಲ್ಲಿ ಯಾರಿಗೋ ಹೇಮಂತ ಬೈಕಿನಲ್ಲಿ ಬರುತ್ತಿದ್ದಾರೆ ಅವರನ್ನು ಮುಗಿಸಿಬಿಡಿ ಎಂದು ಮಾಹಿತಿ ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯ ಸಂಬಂಧಿಕನಾಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯ ಸಂಬಂಧಿಕನಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.